ಪ್ರಾಸ್ತಾವಿಕ. ಅದು ಮಾತಾಡುವವರು ಮತ್ಯಾರು? ಅದೇ ಜೋಯ್‌ಸಿಂಗ್. ಇಂದು ಬಹಳ ಸಂತೋಷದ ದಿನ. ಏಕೆಂದರೆ ನನ್ನ ಸ್ನೇಹಿತರೊಬ್ಬರು ಬಹುವಾಗಿ ಒಂದು ಮಹತ್ಕಾರ್ಯವನ್ನು ಮಾಡಿದ್ದಾರೆ. ಅವರನ್ನು ಈ ದೆಸೆಯಿಂದ ಹೇಗೆ ಸನ್ಮಾನಿಸಬೇಕು ತಿಳಿಯುತ್ತಿಲ್ಲ. ಆದರೂ ಅವರಿಗೆ ಸನ್ಮಾನಿಸಿ "ನಿಶಾನಿ ಏ ಪಾಕಿಸ್ತಾನ" ಕೊಟ್ಟು ಗೌರವಿಸಲಾಗುವುದು. ಏಕೆಂದರೆ ಅವರು ಪಾಕಿಸ್ತಾನಕ್ಕೆ ಬೇಕಾದ ವ್ಯಕ್ತಿ ಎಂದು ಹೇಳಿದ. ಎಲ್ಲರೂ ಚಪ್ಪಾಳೆ ತಟ್ಟಿದರು ನಗುತ್ತಲೆ ಓಹೋ..... ಎಂದು ಸಂಭ್ರಮಿಸಿದರು. ಒಂದು ತಟ್ಟೆಯಲ್ಲಿ ಫರ್ನಗಿಡದ ಎಲೆಗಳಿಂದ ಮಾಡಿದ ಹಾರ ಮತ್ತು ಪೀಚ್ ಹೂಗಳ ಗುಚ್ಛ ಮತ್ತು ಅದರ ಜೊತೆ ನಾಯಿಯ ಎಲುಬುಗಳನ್ನು ಆ ತಟ್ಟೆಯಲ್ಲಿ ಇಟ್ಟು ತನಗೆ ಕೊಡಮಾಡಿದರು.

ರಭಸವಾಗಿ ನುಗ್ಗುವ ಗಾಳಿಗೆ ಸಣ್ಣ ಸಣ್ಣ ಹಿಮಹಳ್ಳುಗಳು ಟೆಂಟಿನೊಳಗೆ ನುಗ್ಗುತ್ತಿದ್ದವು. ಸನ್ಮಾನಕ್ಕೆ ಪ್ರತಿಯಾಗಿ ನಾನು ಮಾತಾಡಲೇಬೇಕು ಎಂದು ಎಲ್ಲರು ಪಟ್ಟು ಹಿಡಿದಿದ್ದರು. ಏನು ಮಾತಾಡಬೇಕು? ಮಾತಾಡಲು ಏನಿದೆ? ದೇಶದ್ರೋಹಿಯ ಬಾಯಿಂದ ಯಾವ ಮಾತು ಕೇಳಲಿದ್ದೀರಿ? ಎನ್ನಬೇಕು ಎಂದುಕೊಂಡೆ. ಆದರೆ ಮಾತಾಡಲೇಬೇಕು ಎಂದು ಶುಭಾಂಕರನೊಡಗೂಡಿ ಎಲ್ಲರೂ ಒತ್ತಾಯಿಸಿದಾಗ ಮಾತಾಡಬೇಕೆನಿಸಿದರೂ ಮಾತಾಡಲಿಲ್ಲ. ಹಾಡಾದರು ಹೇಳು ಎಂದು ಎಲ್ಲರೂ ಒತ್ತಾಯಿಸುವವರೇ. ಹಾಡು ಹಾಡಲು ತಾನೇನು ಗಾಯಕನಲ್ಲ. ಆದರೂ ಅವರು ಕೇಳುವುದಿಲ್ಲ ಕೂಡ ಹಾಡು ಶುರು ಮಾಡಿದೆ.

**ಬಾ ಬಾ ಗಿಳಿಯೇ ಬಣ್ಣದ ಗಿಳಿಯೇ**
**ಹಸಿರು ಮೂಗಿನ ಚಂದದ ಗಿಳಿಯೇ**
**ಹಣ್ಣನು ಕೊಡುವೆನು ಬಾ ಬಾ ಬಾ**

ಒಂದು ಪಲ್ಲವಿ ಮುಗಿದಾಕ್ಷಣವೇ ಜೋಯ್ ಜೋರಾಗಿ ಅನುಕರಿಸಿ ಹಾಡಲು ಆರಂಭ ಮಾಡಿದ.

**ಬಾಯ್ ಬಾಯ್ ಗಳಿಯೇ**
**ಬಾಣದ ಗಳಿಯೇ ಚಾಚಾಗಳಿಯೇ ಶರಣಗಳಿಯೇ**
**ಚಾಚಾ ಶರಣ್ ಗಳಿಯಾ ಶರಣ್ ಚಾಚಾ ಶರಣ ..**

ಎಂದು ಕನ್ನಡ ಪದ್ಯವನ್ನು ಅಪಭ್ರಂಶಗೊಳಿಸಿ ಹಾಡಿದ. ಆ ಪರ್ವತ ಶ್ರೇಣಿಗಳೆಲ್ಲವೂ ಆಮೇಲೆ ತಾವೇ ಹಾಡಲು ಶುರು ಮಾಡಿದವು. **ಚಾಚಾ ಶರಣ್ ಗಳಿಯಾ ಶರಣ್ ಚಾಚಾ ಶರಣ ಗಳಿಯಾ ಶರಣ್...**

ನಾನ್‌ಸೆನ್ಸ್, ಬನ್ನಿ ಅಲ್ಲಿ ದಿಗ್ವಿಜಯ್ ಸಿಂಗ್‌ನ ಹೆಣ ಬಿದ್ದಿದೆ. ನೀವು ಇಲ್ಲಿ ಕುಡಿದು ತಿಂದು ಮೋಜು ಮಾಡುತ್ತಿರುವಿರಿ. ಇದು ನಿಮಗೆ ನಾಚಿಕೆ ಆಗುವುದಿಲ್ಲವೆ? ಕರೆದವನು ಸಾಮಾನ್ಯನಲ್ಲ, ಸೈನ್ಯದ ಮೇಜರ್. ದಿಗ್ವಿಜಯ ಎಂದರೆ ಅಪ್ರತಿಮ ಧೈರ್ಯವಂತ. ಕಳೆದ ತಿಂಗಳು ಆರು ಉಗ್ರರನ್ನು ಕೊಂದ ಭೂಪಾಲದ ಹುಡುಗ. ಸಾಯುವ ಮುಂಚೆಯೂ ಇಬ್ಬರು ಉಗ್ರರನ್ನು ಇಂದು ಕೊಂದಿದ್ದ. ಆತನ ಗ್ರೆನೈಡ್ ದಾಳಿಗೆ ಅವರು ಸುಟ್ಟು ಕರಕಲಾಗಿದ್ದರು.

ಎಲ್ಲರೂ ಗಾಬರಿಯಾಗಿದ್ದರು. ಶರಣ್ ಕೈಯ್ಯಲ್ಲಿದ್ದ ಹಾರ-ತುರಾಯಿ ನೋಡಿದ ಮೇಜರ್ ಸಾಹೇಬರಿಗೆ ಏನು ಅನ್ನಿಸಿತೋ ಏನೋ. ಅದನ್ನು ಜೋರಾಗಿ ಆಕಾಶಾಭಿಮುಖವಾಗಿ ತೂರಿದರು. ಕಾಲನ್ನು ಭೂಮಿಗೆ ಜೋರಾಗಿ ಒದ್ದರು ದ್ರೋಹಿಗಳೇ ಎಂದು ಕಿರುಚಿ ಆ ಹುಡುಗನನ್ನು ನೋಡಿ ಕಲಿಯಿರಿ. ಆ ಹುಡುಗನ ಧೈರ್ಯ ಸಾಹಸ ದೇಶದ್ರೋಹಿಗಳಿಗೆ ಒಂದು ಪಾಠವಾಗಬೇಕು ಎಂದು ಸಿಟ್ಟಿನಿಂದಲೇ ಮೂವ್ ಟು ಫೀಲ್ಡ್ ಎಂದು ಎಲ್ಲರನ್ನು ಕರೆದುಕೊಂಡು ಹೋದರು. ಆ ಒಂದು ವಾರ ದಿಗ್ವಿಜಯನ ನೆನಪಲ್ಲೇ ಹೋಯಿತು. ಅದರ ಜೊತೆ ನಾನು ಅನಾಥನಂತೆ ಈ ದೇಶಕ್ಕೆ ಸಂಬಂಧವಿಲ್ಲದ ಒಬ್ಬವನಾಗಿ ಆ ಡೇರೆಯಲ್ಲೇ ಕಾಲ ಕಳೆದೆ. ಎಲ್ಲಕ್ಕಿಂತಲೂ ತನ್ನನ್ನು ಬಹುವಾಗಿ ಬಾಧಿಸಿದ್ದು ಕಾಡಿದ್ದು, ತನ್ನನ್ನು ಇಂದಿಗೂ ಬಾಧಿಸುತ್ತಿರುವುದು ಜೋಯ್‌ನ ಆಗಿನ ವರ್ತನೆ. ಆ ತಟ್ಟೆಯಲ್ಲಿ ಇಟ್ಟು ನಾಯಿ ಎಲುಬುಗಳನ್ನು ಕೊಟ್ಟಿದ್ದು ತಮಾಷೆಗಾಗಿ ಇರಬಹುದು. ಆದರೆ ಆತನ ಹಿಂದಿನ ಮಾತು ಮರೆಯಲು ಹೇಗೆ ಸಾಧ್ಯ ಅವನೇ ಯಾವಾಗಲೂ ಹೇಳುತ್ತಿದ್ದ... ನಮ್ಮ ಗುಡ್ಡಗಾಡುಗಳ ರಾಜ್ಯಗಳಲ್ಲಿ ದ್ರೋಹಿಗಳಿಗೆ ನಾಯಿ ಎಲುಬುಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಅದು ಒಂದು ರೀತಿಯ ಎಚ್ಚರಿಕೆಯಾಗಿಯೂ ಇರಬಹುದು. ಈ ಮಾತು ರಾತ್ರಿಯ ನಿದ್ರೆಯನ್ನು ಕಸಿದಿತ್ತು. ಜೋಯ್‌ನ ಮಾತುಗಳನ್ನು ನಾವು ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ ಎಂದು ಶುಭಾಂಕರ ಹೇಳಿದರೂ ಕೂಡ ಆಂತರ್ಯದಲ್ಲಿರುವ ಆ ಸಂಶಯದ ವಾಸನೆ? ಯೋಚಿಸುತ್ತಾ ಯೋಚಿಸುತ್ತಾ ನನ್ನ ಮನಸ್ಸು ಅದೇ